ಮೂಡಿಗರೆ ತಾಲ್ಲೂಕ್ ಗೌಡಳ್ಳಿ ಗ್ರಾಮದಿಂದಿರುವ ರಸ್ತೆಯನ್ನು ವಿಸ್ತರಿಸುವುದು.

10. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ). —

ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

ಮೂಡಿಗೆರೆ ತಾಲ್ಲೂಕ್ ಗೌಡಳ್ಳಿ ಗ್ರಾಮದಿಂದ ರಸ್ತೆ ಇದ್ದು ಅದು ಕೇವಲ 4 ಮೈಲಿ ಮಾತ್ರ ಮುಂದುವರಿದು ಹಾಗೇ ಬಿಳಿದಿದ್ದು ಅದನ್ನು ದೇವಪುರ ಗ್ರಾಮದವರೆವಿಗೂ 4 ಮೈಲಿ ವಿಸ್ತರಿಸಲು ಸರ್ಕಾರದವರು ಕ್ರಮ ಕೈಕೊಂಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—

ದೇವಪುರ ಎಂಬ ಗ್ರಾಮ ಮೂಡಿಗೆರೆ ತಾಲ್ಲೂಕಿನಲ್ಲಿ ಇಲ್ಲ. ಇದು ಬಹುಶಃ ದೇವರುಂದ ಎಂದಿರಬೇಕು. ಈ ರಸ್ತೆ ಪೂರ್ಣವಾಗಿ ರಚಿಸಲ್ಪಟ್ಟಿದೆ.

ಮೂಡಿಗೆರೆ ವಿಧಾನಸಭಾ ಜುನಾವಣಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದಿರುವ ಗ್ರಾಮಗಳು ಅಥವಾ ಕಾಲೋನಿಗಳು

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

11. ಸಮಾಜ ವಿಕಾಸ ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಮೂಡಿಗೆರೆ ವಿಧಾನ ಸಭಾ ಜುನಾವಣಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದಿರುವ ಗ್ರಾಮಗಳ ಅಥವಾ ಪ್ರತ್ಯೇಕ ಕಾಲೋನಿಗಳ ಸಂಖ್ಯೆ ಎಷ್ಟು ?

(ಆ) ಒಂದೇ ಗ್ರಾಮದಲ್ಲಿ ದೂರ ದೂರವಾಗಿ ಮತ್ತು ಪ್ರತ್ಯೇಕವಾಗಿರುವ ಬೇರೆ ಬೇರೆ ವಠಾರ ಅಥವಾ ಕಾಲೋನಿಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲದೆ ಇರುವ ಗ್ರಾಮಗಳ ಸಂಖ್ಯೆಗಳೆಷ್ಟು ?

(ಪ್ರತಿಯೊಂದು ಗ್ರಾಮದ ವಠಾರ ಅಥವಾ ಕಾಲೋನಿಗಳ ವಿವರ ಸಹಿತ ಮಾಹಿತಿ ಕೊಡತಕ್ಕದ್ದು).

(ಇ) ಮಲೆನಾಡು ಪ್ರದೇಶದಲ್ಲಿ ಹೆಚ್ಚು ಹಣ ಖರ್ಚುಮಾಡಿ ನೂರಾರು ಅಡಿ ಮೇಲ್ಪಟ್ಟು ಬಾವಿ ತೋಡಿಸಿದಾಗ್ಯೂ ಇಂಥ ಆಳವಾದ ಬಾವಿಗಳಲ್ಲಿ ನೀರು ಸೇದುವುದು (ತೆಗೆಯುವುದು) ಬಹಳ ಕಷ್ಟಕರ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದಲ್ಲಿ ಈ ಕಷ್ಟವನ್ನು ನಿವಾರಿಸಲು ಸರ್ಕಾರದವರು ಮಲೆನಾಡು ಪ್ರದೇಶದಲ್ಲಿ ಭೂಮಿಯ ಮೇಲ್ಭಾಗದಲ್ಲಿ ಹರಿಯುವ, ಹೇರಳವಾಗಿ ನೀರಿನ ಸೌಕರ್ಯ ಯಾವಾಗಲೂ ಇರುವುದರಿಂದ ಈ ನೀರನ್ನು ಪೈಪುಗಳನ್ನು ಹಾಕಿ ಇಂಥ ಹಳ್ಳಿಗಳಿಗೆ ವಠಾರ ಮತ್ತು ಕಾಲೋನಿಗಳಿಗೆ ನೀರನ್ನು ಒದಗಿಸಲು ಸರ್ಕಾರ ಪರಿಶೀಲನೆ ಮಾಡಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಸಮಾಜ ವಿಕಾಸ ಮತ್ತು ಸಮಾಜ ಕಲ್ಯಾಣ ಮಂತ್ರಿಗಳು).—

(ಅ) (1) ಹನ್ನೆರಡು ಗ್ರಾಮಗಳು.
(2) ಐವತ್ತೊಂದು ಹಟ್ಟಿಗಳು (ಹ್ಯಾಮ್ಲೆಟ್‌ಗಳು).

(ಆ) (1) ಐವತ್ತೊಂದು.
(2) IVನೇ ಪರಿಶಿಷ್ಟವನ್ನು ನೋಡಿ.

(ಇ) ಇಲ್ಲ. ಸಾಮಾನ್ಯವಾಗಿ 65 ಅಡಿಗಳಿಗಿಂತ ಹೆಚ್ಚಿನ ಆಳದ ಬಾವಿಗಳನ್ನು ತೆಗೆಸಿಲ್ಲ.

(ಈ) ಕುಡಿಯುವ ನೀರಿನ ಬಾವಿಯನ್ನು ತೆಗೆಸಲು ಸಾಧ್ಯವಿಲ್ಲದಂಥ ಸ್ಥಳದಲ್ಲಿ ಕೊಳಾಯಿ ಮೂಲಕ ನೀರು ಸರಬರಾಜು ಮಾಡುವ ಸಣ್ಣ ಸಣ್ಣ ಯೋಜನೆ ಸಿದ್ಧಿಸಲು ಏರ್ಪಡಿಸಿದೆ.

STATEMENT—IV

Statement of well-less Hamlets

1 Banakalpet (Santhemaidan)
2 Tripura near school
3 Balige A.K. Colony
4 Dasarahalli
5 B. Hosahalli (Dugganamakki)
6 Badhrakali
7 Kalasa Kelangadi
8 Amthi A.K. Colony
9 Upper Gabgal
10 Hadivoni (Harasinamakki)
11 Javali (Puradamakki)
12 Samse (Bastigodu)
13 Inakani Mallikhan A.K. Colony
14 Hemmaki (Belagar)
15 Yedur A.K. Colony
16 Banakal Horatti
17 Sidalamakki (Idakani)
18 Halalikere
19 K. Talagur Handpost
20 Durgadahalli A.K. Colony
21 Daradahalli A.K. Colony
22 Bettadamane A.K. Colony
23 Laxmipura
24 Kadidal A.K. Colony
25 Muthigepura A.K. Colony
26 Dundiga
27 Janbylu
28 Kelamekanagadde A.K. Colony
29 Chakkodige Kelakere
30 Nagalapura A.K. Colony
31 Kallahalla
32 Hyaragudde A.K. Colony
33 Lokavalli Kelakere
34 Krishnapura
35 Voradanakodu (Gowdahalli)
36 Badigemanekodu (Hosakere)
37 Bombarakodi (Sathiganahalli)
38 Kumbaradi Horati
39 Seegodu Mule (Halekere)
40 Hosahalli Horatti
41 Hosapura Gonibeedu A.K. Colony
42 Bellur
43 Makonahalli A.K. Colony
44 Surattige (Bakki)
45 Lower Thudiyala
46 Kuduvalalu
47 Handuguli
48 Kaskebylu
49 Hosasanahalli A.K. colony
50 Maggalamakki A.K. colony
51 Saladamara